## 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿ

**ಎಸ್.ಸಿ. ನಂಃ 5033/2019**

**(ದಿನಾಂಕಃ 16-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಹೆಸರುಃ ಲೋಕೇಶ್ ಪಿ.ಡಬ್ಲ್ಯೂ- 23.
ತಂದೆಯ ಹೆಸರುಃ ಬೋಗೇಶಯ್ಯ ಸಿ.ಡಬ್ಲ್ಯೂ- 08.
ವಯಸ್ಸುಃ 31 ವರ್ಷ
ಉದ್ಯೋಗಃ ವ್ಯವಸಾಯ.
ವಾಸಃ ಗುರಿಕಾರನಹಳ್ಳಿ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಈ ಮೊದಲು ನಾನು ಅಡುಗೆ ಕೆಲಸ ಮಾಡುತ್ತಿದ್ದೆ. ಈಗ ವ್ಯವಸಾಯ ಮಾಡುತ್ತಿದ್ದೇನೆ. ಚಾಸಾ-7 ವಿಜಯ್ ಕುಮಾರ್ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಯಾವುದೇ ಆರೋಪಿತರನ್ನು ಈ ಮೊದಲು ನೋಡಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

ಸಾಕ್ಷಿಗೆ ನಿಪಿ-4 ಮತ್ತು 5 ಪಂಚನಾಮೆ ತೋರಿಸಿ ತನ್ನ ಸಹಿ ಗುರುತಿಸಲು ಕೋರಲಾಗಿ, ಸಾಕ್ಷಿಯ ನೋಡಿ ಗುರುತಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಪಿ 4(ಜಿ) ಮತ್ತು 5(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಎಲ್ಲಿ ಮತ್ತು ಯಾವ ವಿಚಾರವಾಗಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಸ್ಥಳ ಪರಿಶೀಲನೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಸನ್ 2019 ನೇ ಸಾಲಿನಲ್ಲಿ ಹೇಳಿಕೆ ನೀಡುವ ಪೂರ್ವದಲ್ಲಿ 4 ತಿಂಗಳಿಂದ ಚನ್ನರಾಯಪಟ್ಟಣದ ಕೃತಿಕಾ ಲಾಡ್ಜ್ ನಲ್ಲಿ ರೂಮ್ ಬಾಯ್ ಆಗಿ ಕೆಲಸ ಮಾಡಿಕೊಂಡಿದ್ದೆ ಎಂದರೆ ಸರಿ. ದಿನಾಂಕಃ 06-01-2019 ನೇದ್ದಕ್ಕಿಂತ ಮೊದಲು ಒಂದು ವಾರ ಕೆಲಸಕ್ಕೆ ರಜೆ ಹಾಕಿದ್ದೆ ಎಂದರೆ ಸರಿ. ದಿನಾಂಕಃ 06-01-2019 ಕ್ಕೆ ನಾನು ಲಾಡ್ಜ್ ನ ಕೆಲಸಕ್ಕೆ ವಾಪಸ್ಸು ಬಂದೆ ಎಂದರೆ ಸರಿಯಲ್ಲ. ಆ ದಿನ ರಾತ್ರಿ 9-30 ಗಂಟೆ ಸುಮಾರಿಗೆ ರೂಮ್ ನಂಃ 126 ಮತ್ತು 127 ನೇದ್ದವುಗಳಲ್ಲಿ ಇದ್ದವರಿಗೆ ನಾನು ಹೊರಗಿನಿಂದ ಊಟ ತಂದು ಕೊಟ್ಟೆ ಎಂದರೆ ಸರಿಯಲ್ಲ. ರೂಮ್ ನಂಃ 126 ರಲ್ಲಿ ಒಬ್ಬ ಹುಡುಗ ಮತ್ತು ಹುಡುಗಿ ಇದ್ದರು ಎಂದರೆ ಸರಿಯಲ್ಲ. ರೂಮ್ ನಂಃ 127 ರಲ್ಲಿ ಕಾರು ಓಡಿಸುಕೊಂಡು ಬಂದ ಹುಡುಗ ಇದ್ದ ಎಂದರೆ ಸರಿಯಲ್ಲ. ಅವರ ಪೈಕಿ ಹುಡುಗನ ಹೆಸರು ಮನು, ಹುಡುಗಿ ಹೆಸರು ಪಲ್ಲವಿ ಉರುಫ್ ಪ್ರಿಯಾ ಹಾಗೂ ಕಾರು ಓಡಿಸುಕೊಂಡು ಬಂದ ವ್ಯಕ್ತಿ ರಂಗನಾಥ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ.

ದಿನಾಂಕಃ 07-01-2019 ರಂದು ಬೆಳಗಿನ ಜಾವ 3-00 ಗಂಟೆ ಸಮಯದಲ್ಲಿ ನಾನು ರಿಪಸ್ಟನಿಸ್ಟ್ ಪೂರ್ವ ಪಕ್ಕದಲ್ಲಿರುವ ಇರಮ ರೂಮ್ ನಲ್ಲಿ ಮಲಗಿದ್ದೆ ಎಂದರೆ ಸರಿಯಲ್ಲ. ಆಗ ಏನೋ ಗಲಾಟೆಯಾಯಿತು ಎಂದರೆ ಸರಿಯಲ್ಲ. ಹೋಗಿ ನೋಡಲಾಗಿ, ಅಲ್ಲಿ ಸುಮಾರು 10-11 ಜನರು ಒಂದು ಹುಡುಗಿ ಮತ್ತು ಹುಡುಗನ ಫೋಟೋ ತೋರಿಸುತ್ತಾ, ಲಾಡ್ಜ್ ನಲ್ಲಿ ಇದ್ದಾರಾ ಎಂದು ಕೇಳುತ್ತಿದ್ದರು ಎಂದರೆ ಸರಿಯಲ್ಲ. ಫೋಟೋ ನೋಡಲಾಗಿ, ಅವರು ನಮ್ಮ ಲಾಡ್ಜ್ ನ ರೂಮ್ ನಂಃ 126 ರಲ್ಲಿ ಇದ್ದ ಹುಡುಗ-ಹುಡುಗಿಯಾಗಿದ್ದರು ಎಂದರೆ ಸರಿಯಲ್ಲ. ಮೊದಲಿಗೆ ಅವರಿಗೆ ಮ್ಯಾನೇಜರ್ ಹೇಳಲಿಲ್ಲ, ನಂತರ ಅವರು ಗೋಗರೆದು

ಕೇಳಿದಾಗ ಹೌದು, ರೂಮ್ ನಂಃ 126 ರಲ್ಲಿ ಇದ್ದಾರೆ ಎಂದು ಹೇಳಿದ ಎಂದರೆ ಸರಿಯಲ್ಲ. ಆಗ ನೇರವಾಗಿ ಅವರೆಲ್ಲರೂ ನಮ್ಮನ್ನು ರೂಮ್ ನಂಃ 126ರ ಬಳಿ ಕರೆದುಕೊಂಡು ಹೋಗಿ ನಮ್ಮಿಂದ ಬಾಗಿಲು ತೆಗೆಸಿ, ನಂತರ ಮನು ಮತ್ತು ಪಲ್ಲವಿಯನ್ನು ಹೊರಗೆ ಎಳೆದುಕೊಂಡರು ಎಂದರೆ ಸರಿಯಲ್ಲ. ಹುಡುಗಿಗೆ ಅವರ ಪೈಕಿ ಒಬ್ಬ ಯಜಮಾನರು ಹೊಡೆದರು ಎಂದರೆ ಸರಿಯಲ್ಲ. ಉಳಿದ ಜನರು ಹುಡುಗನಿಗೆ ಬಾಯಿ ಮತ್ತು ಮೂಗಿನಲ್ಲಿ ರಕ್ತ ಬರುವಂತೆ ಕೈಗಳಿಂದ ಹೊಡೆದರು, ಬಳಿಕ ಆತನ ಕೈಯನ್ನು ಟವಲ್ ನಿಂದ ಕಟ್ಟಿ, ಎಳೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ರೀತಿ ಬಂದವರು ಒಬ್ಬರಿಗೊಬ್ಬರು ಧರಣಿ, ಬಸಣ್ಣ, ಕಿರಣ್, ಅರುಣ್, ಅನಿ, ಚೇತನ್, ಕುಮಾರ್, ಚಂದ್ರ, ಬೋಡಿ, ಬುಡ್ಡ, ಮಂಜ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಂತರ ರೂಮ್ ನಂಃ 127ರಲ್ಲಿ ಇದ್ದ ರಂಗನಾಥ ಎಂಬ ಹುಡುಗ ಬಂದು ಕೇಳಿದಾಗ ಘಟನೆ ಬಗ್ಗೆ ನಾನು ತಿಳಿಸಿದೆ ಎಂದರೆ ಸರಿಯಲ್ಲ. ನಂತರ ಆತ ಅಲ್ಲಿಂದ ಹೊರಟು ಹೋದ ಎಂದರೆ ಸರಿಯಲ್ಲ, ಅನಂತರ ವಿಚಾರ ತಿಳಿಯಲಾಗಿ, ಬೆಂಗಳೂರಿನ ಕಾಮಾಕ್ಷಿಪಾಳ್ಯದ ವಾಸಿ ಬಸವರಾಜು ರವರ ಮಗಳು ಪಲ್ಲವಿರವರನ್ನು ಅವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮನು ಸುಮಾರು 2ವರೆ ತಿಂಗಳಿಂದ ಆಕೆಯನ್ನು ಕರೆದುಕೊಂಡು ಅಲ್ಲಿ-ಇಲ್ಲಿ ಸುತ್ತಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕುರಿತು ಆ ಹುಡುಗಿ ಮಾವ ಹಾಗೂ ಇತರೆ ಆರೋಪಿತರು ಕೂಡಿಕೊಂಡು ಕೋಳಿಹಳ್ಳಿ ಶೆಡ್ ನಲ್ಲಿ ಮನು ರವರನ್ನು ಇಟ್ಟುಕೊಂಡು ನಂತರ ಕೊಲೆ ಮಾಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ದಿನಾಂಕಃ 08-03-2019 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ "ದಿನಾಂಕಃ 06-01-2019 ರಂದು ..... ನುಡಿಯುತ್ತೇನೆಃ" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-55 ಎಂದು ಗುರುತಿಸಲಾಯಿತು.

ದಿನಾಂಕಃ 18-01-2019 ರಂದು ಬೆಳಿಗ್ಗೆ 11-00 ರಿಂದ 12-00 ಗಂಟೆಯವರೆಗೆ ಕೃತಿಕಾ ಲಾಡ್ಜ್ ಬಳಿ ಆರೋಪಿ ನಂಃ 6, 9 ಮತ್ತು 11 ರವರನ್ನು ಪೋಲಿಸರು

ಕರೆದುಕೊಂಡು ಬಂದಾಗ ಸ್ಥಳ ಪರಿಶೀಲನೆ ಮಾಡಿ, ನಿಪಿ-4 ರಂತೆ ಪಂಚನಾಮೆ ತಯಾರಿಸಿ, ಅದರಲ್ಲಿ ಕಂಡು ಬರುವ ಛಾಯಾಚಿತ್ರ ತೆಗೆದು ನಮಗೆ ಓದಿ ಹೇಳಿ ಸಹಿ ಪಡೆದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ-7 ವಿಜಯ್‌ಕುಮಾರ್ ಹಾಜರುಪಡಿಸಿದ ನಿಪಿ-3 ರಂತೆ ಪುಸ್ತಕವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.

ನಂತರ ಅದೇ ದಿನ ಮಧ್ಯಾಹ್ನ 12-30 ರಿಂದ 1-15 ಗಂಟೆಯವರೆಗೆ ಲಾಡ್ಜ್ ನ ಮುಂಭಾಗ ಹೊರಗಡೆ ಲಾಡ್ಜ್ ನಲ್ಲಿದ್ದ ಮನುರವರ ಸ್ವಿಫ್ಟ್ ಕಾರನ್ನು ನಿಪಿ-5 ರ ಪಂಚನಾಮೆಯಂತೆ ಅಮಾನತ್ತುಪಡಿಸಿಕೊಂಡು ಓದಿ ಹೇಳಿ ಸಹಿ ಪಡೆದರು ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ನಿಪಿ-5 ರಲ್ಲಿ ಕಂಡು ಬರುವ ಛಾಯಾಚಿತ್ರ ತೆಗೆಯಲಾಯಿತು ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಚಾರಗಳು ನನಗೆ ಸ್ವತಃ ಗೊತ್ತಿದ್ದರೂ ಆರೋಪಿತರಿಗೆ ಹೆದರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಸ್.ಕೆ ವಕೀಲರಿಂದಃ ಏನೂ ಇಲ್ಲ.**

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇ ಕೇ ಸರಿ ಇದೆ

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಧುಗಿರಿ.